# ‘ಬೆಳಕು’ ಕಣ್ಣಿಗೆ ಕಾಣುವ ದೇವರು

*– ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು*

ಸುತ್ತೂರು: ನಮಗೆ ಕಣ್ಣಿಗೆ ಕಾಣುವುದು ಭೌತಿಕ ಸೂರ್ಯನ ಬೆಳಕು. ಹಾಗೆಯೆ ಅಂತರಂಗದಲ್ಲಿ ಒಂದು ಬೆಳಕು ಇದೆ. ಅದನ್ನು ಕಾಣುವ, ಅರಿಯುವ ಪ್ರಯತ್ನ ಮಾಡಿದರೆ ಭಗವಂತನನ್ನು ಕಾಣಬಹುದು ಎಂದು ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಪ್ರವಚನ ಕಾರ್ಯಕ್ರಮದಲ್ಲಿ ತಿಳಿಸಿದರು.

ಭಾರತ ದೇಶವು ಋಷಿಮುನಿಗಳ ರಾಷ್ಟ್ರ. ಅವರು ಪ್ರಕೃತಿ ಮಧ್ಯ ಕುಟೀರಗಳಲ್ಲಿ ವಾಸಿಸುತ್ತಿದ್ದರು. ಆ ಕಾರಣಕ್ಕೆ ಅವರ ಹೃದಯ ಪರಿಶುದ್ಧವಾಗಿತ್ತು. ಸದಾ ಸಂತೋಷದಿಂದ ಇರುತ್ತಿದ್ದರು. ಮನುಷ್ಯ ದೊಡ್ಡದಾದ ಬಂಗಲೆಯಲ್ಲಿದ್ದರೂ, ಖರ್ಚು ಮಾಡಲು ಸಾಕಷ್ಟು ಹಣವಿದ್ದರೂ ಋಷಿಮುನಿಗಳಷ್ಟು ಸಂತೋಷವಾಗಿರುವುದಿಲ್ಲ.

ತೋಟವೊಂದರಲ್ಲಿ ಮಾಲಿಯು ಸಾವಿರಾರು ಹೂಗಳನ್ನು ಬೆಳೆದರೂ ಹೂವಿನ ಸೌಂದರ್ಯವನ್ನು ಸವಿಯುವ ಬದಲು ಹೂಗಳನ್ನು ಎಣಿಸುತ್ತಾನೆ. ಅವನಿಗೆ ಅವುಗಳಲ್ಲಿ ಸೌಂದರ್ಯ ಕಾಣುವುದಿಲ್ಲ, ಬದಲಿಗೆ ಹಣ ಕಾಣುತ್ತದೆ. ಮುನಿಯೊಬ್ಬ ಹೂವಿನಲ್ಲಿ ಸೌಂದರ್ಯವನ್ನು ಕಾಣುತ್ತಾನೆ. ಆ ಸೌಂದರ್ಯವೇ ದೇವರು. ನಾವು ಹಣದಲ್ಲಿ ಸೌಂದರ್ಯವನ್ನು ಕಾಣುತ್ತೇವೆ. ದೇವರ ಪೂಜೆಗೆ ಹೂಗಳನ್ನು ಬಳಸುತ್ತೇವೆಯೇ ಹೊರತು ಹಣವನ್ನಲ್ಲ. ಭಗವಂತನಿಗೆ ಇಷ್ಟವಾಗುವುದು ಪುಷ್ಪಗಳೇ ಹೊರತು ಹಣವಲ್ಲ. ಅದು ನಮ್ಮನ್ನು ಸಂತೋಷವಾಗಿರಿಸುವುದಿಲ್ಲ. ಅವುಗಳು ನಮಗೆ ಆಸೆಗಳನ್ನು ಕೆರಳಿಸುತ್ತದೆ ಎಂದರು.

ಸಾವಿರಾರು ವರ್ಷಗಳ ಹಿಂದೆ ಇದ್ದ ಋಷಿಮುನಿಯೊಬ್ಬರು ಹೀಗೆ ಹೇಳುತ್ತಾರೆ, ‘ಅಲ್ಲಿ ಸೂರ್ಯನಿದ್ದಾನೆ, ಪ್ರಪಂಚವನ್ನು ಸೃಷ್ಟಿಸಿದ್ದಾನೆ. ದೇವರು ಕೇವಲ ಬೆಳಕು, ಅದ್ಭುತ ಬೆಳಕು ಹಾಗೂ ದೈವಿಕ ಬೆಳಕು. ನಮಗೆ ಹೊರಗೆ ಕಾಣುವ ಸೂರ್ಯ ಭೌತಿಕ ಸೂರ್ಯ, ಅದನ್ನು ಕಣ್ಣಿನಿಂದ ಕಾಣಬಹುದು. ಆದರೆ ಅಂತರಂಗದ ಸೂರ್ಯನನ್ನು ಭೌತಿಕವಾಗಿ ಕಾಣಲು ಸಾಧ್ಯವಿಲ್ಲ, ಅದನ್ನು ಅನುಭವಿಸಿ ಅರಿಯಬೇಕು.’ ಅದೇ ಮಹಾನ್ ಬೆಳಕು, ಎಲ್ಲಾ ಬೆಳಕುಗಳ ಬೆಳಕು, ಅದೇ ದೈವಿಕವಾದ ಸೂರ್ಯ, ಅದನ್ನು ತನ್ನೊಳಗೆ ಕಾಣಬೇಕು. ನಾವು ಅಂತರಂಗದ ಸೂರ್ಯನ್ನು ಅರಿತು, ಚಿಂತನೆ ಮಾಡಿ ಅನುಭವಿಸಬೇಕು. ಏಕೆಂದರೆ ಅದರಿಂದಲೇ ನಾವು ಚಿಂತನೆ ನಡೆಸುವುದು, ಅನುಭವಿಸುವುದು. ಅಂತರಂಗದ ಸೂರ್ಯನಿಲ್ಲವೆಂದರೆ ನಾವು ಅಂತರಂಗದ ಪ್ರಪಂಚವನ್ನೇ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಅದನ್ನು ‘ಸವಿತೃ ದೇವಹಃ’ ಎಂದು ಕರೆಯಲಾಗುತ್ತದೆ. ಬಾಹ್ಯ ಸೂರ್ಯನಿಗೆ ಮಿತಿ ಇದೆ. ಆದರೆ ಅಂತರಂಗದ ಸೂರ್ಯನಿಗೆ ಇತಿಮಿತಿ ಎಂಬುದಿಲ್ಲ. ಸೂರ್ಯನಿಗೆ ಆರಂಭ, ಅಂತ್ಯವೆಂಬುದಿದೆ, ಆದೆರ ಅಂತರಂಗದ ಸೂರ್ಯನಿಗೆ ಕೊನೆಮೊದಲಿಲ್ಲ. ಸಮಯ ಅದನ್ನು ಅಳೆಯಲಾಗುವುದಿಲ್ಲ. ಅದಕ್ಕೆ ನಿರ್ದಿಷ್ಟ ಸ್ಥಳ ಹಾಗೂ ಸ್ಥಿತಿ ಎಂಬುದಿಲ್ಲ, ಅದು ಸೀಮಾತೀತ. ಎಲ್ಲವೂ ಅವನಿಂದಲೇ ಆದ್ದರಿಂದ ದೇವರೆಂದರೆ ಬೆಳಕು.

ಬೆಳಕು ಸೌಂದರ್ಯದ ಮೂಲ, ಜೀವದ ಮೂಲ, ಕಣ್ಣುಗಳಿಂದ, ಮನಸ್ಸಿನಿಂದ ಅವುಗಳನ್ನು ನೋಡಿ ಆನಂದಿಸಿ. ನಮಗೆ ಜೀವನದಲ್ಲಿ ಬೇಕಾಗಿರುವುದು ಆನಂದ. ತೃಪ್ತಿ ಹಾಗೂ ಆನಂದ ಇವೆರಡೂ

ಭಿನ್ನ ಸಂಗತಿಗಳು. ಇಂದ್ರಿಯಗಳಿಂದ ತೃಪ್ತಿ ದೊರಕುತ್ತದೆ. ಆದರೆ ಆನಂದವು ಆಸೆಯಿಲ್ಲದ ಮನಸ್ಸಿನಿಂದ ಲಭಿಸುತ್ತದೆ. ಅದು ಹೊರಗಿನ ವಸ್ತುಗಳನ್ನು ಅವಲಂಬಿಸಿಲ್ಲ. ಆದರೆ ಮನುಷ್ಯ ಹೆಚ್ಚಾಗಿ ತೃಪ್ತಿ ಬಯಸುತ್ತಾನೆಯೋ ಹೊರತು ಆನಂದವನ್ನಲ್ಲ. ಮನಸ್ಸನ್ನು ಕಲಕುವ ತೆರೆಗಳನ್ನು ಸರಿಸಿದರೆ ಸ್ವರ್ಗ ಸಂತೋಷ ಲಭಿಸುತ್ತದೆ. ನಾವು ಪ್ರಪಂಚದಲ್ಲಿ ಸಂತೋಷವಾಗಿರಬೇಕು. ಅದು ನಮ್ಮ ಆಂತರಿಕ ಬೆಳಕನ್ನು ಕಾಣುವ ಮೂಲಕ ಲಭಿಸುತ್ತದೆ ಎಂದರು.

ಇದಕ್ಕೂ ಮೊದಲು ಶ್ರೀ ಜಯರಾಜೇಂದ್ರರು 'ನಂಬಿಕೆಯೊಳಗೆ ಶಕ್ತಿಯಿದೆ' ಎಂಬ ತತ್ತ್ವವನ್ನು ಕಥೆಯೊಂದನ್ನು ಉದಾಹರಣೆಯಾಗಿ ಹೇಳುವ ಮೂಲಕ ತಿಳಿಸಿದರು.